ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸರಕಾರದ ತಿಳಿವಳಿಕೆಗೆ ಬಂದಿಲ್ಲ. ಈಗ ನೀವು ಹಾಗೆ ಹೇಳಿದ್ದೀರಿ. ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ತರಿಸಿ ನೋಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಮಾನ್ಯ ಮಂತ್ರಿಗಳು ಆ ಎಲ್ಲ ಸ್ಥಳಗಳಿಗೆ ಹೋಗಿ ನೋಡಿ ವಿದ್ಯುಚ್ಛಕ್ತಿಯನ್ನು ಪೂರೈಸುತ್ತೇವೆಂದು ಹೇಳಿದ್ದಾರೋ ಅಥವಾ ಸುಮ್ಮನೆ ಜನಗಳನ್ನು ಸಂತೈಸುವುದಕ್ಕೋಸ್ಕರ ಹಾಗೆ ಹೇಳಿದ್ದಾರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದೇ ಒಂದು ಕೆಲಸವನ್ನು ಮಾಡಿಕೊಡುತ್ತೇವೆಂದು ಹೇಳುವಾಗ ಅದಕ್ಕೆ ಸಂಬಂಧಪಟ್ಟ ರೀತಿ ನೀತಿಗಳನ್ನು ಅನುಸರಿಸಿ ಹಾಗೆ ಮಾಡುತ್ತೇವೆಂದು ಹೇಳಬೇಕಾಗುತ್ತದೆ.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಶಹಾ.—ನಿಡಗುಂದಿ ಊರಿನಲ್ಲಿ ನೇಕಾರರ ಕೈಮಗ್ಗಗಳು ಇವೆ. ಈ ಊರಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಲು ಇನ್ನೂ ಎಷ್ಟು ದಿವಸ ಬೇಕಾಗುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಇದಕ್ಕೆ ಸಂಬಂಧಪಟ್ಟದ್ದಲ್ಲ.

Sri L. S. VENKAJI RAO.—Is it not a fact that the Electricity Board is an autonomous body ?

Sri H. M. CHANNABASAPPA.—It is an autonomous body in respect of certain things and not completely autonomous in respect of certain other things.

Sri L. S. VENKAJI RAO.—Have the Government retained the power of directing them to do a particular thing in a particular manner ?

Sri H. M. CHANNABASAPPA.—It is provided in the Electricity Act. Government have powers to give direction under certain set of circumstances.

Sri J. B. MALLARADHYA.—Supplementary to (b), will Government let us know the conditions under which the Government of Bombay agreed to supply power ?

Sri H. M. CHANNABASAPPA.—The Government of Bombay thought of putting up a thermal plant there at a cost of 1·6 lakhs.

Sri J. B. MALLARADHYA.—In answer to question (b), "whether they are also aware of the fact that the former Government of Bombay had decided to supply power to these villages", the answer given is "load details had been collected with a view to supplying power to these villages." The question is one thing and the answer given is quite another.

Sri H. M. CHANNABASAPPA.—The answer is correct. The Government of Bombay had not decided to give power. As noted in the answer, details had been collected with a view to supplying power. The Bombay Government had not decided to supply power.

Sri J. B. MALLARADHYA.—My question is what were the conditions. Did the Bombay Government insist on a minimum guarantee and what was their policy ? That is fundamental. Did the Bombay Government specify as one of the conditions that there should be minimum guarantee ?

Sri H. M. CHANNABASAPPA.—They would have been guided by the rules obtaining in Bombay. I cannot tell you what those rules are.

Sr C. S. HULKOTI.—The Hon'ble Minister was pleased to say that power for these places would be supplied from Jog. May I know whether there is surplus power in Jog ?

Sri H. M. CHANNABASAPPA.—I have already submitted that because we have the capacity to supply power, we are thinking of surveying and also getting load survey forms duly filled in.

Sri G. VENKATAI GOWDA.—I want to know whether this scheme of power supply is included in the Second Five Year Plan so far as these areas are concerned.

Sri H. M. CHANNABASAPPA.—It need not be included in the Second Five Year Plan. We propose to take it up under the new scheme.

Work done by Kadaba N.E.S. Block in South Kanara District.

Q.—2332. Sri K. VENKATARAMANA GOWDA (Puttur).—

Will the Government be pleased to state :—

(*a*) the achievements of the National Extension Service Scheme since the date of its operation in the Kadaba Development Block under the heads of :—

(i) Local works relating to roads, culverts, public health, sanitation, drainage, school building, etc.,

(ii) Social Education ;

(SRI K. VENKATARAMANA GOWDA)

(iii) Grants-in-aid in respect of recurring expenditure for schools, hospitals, and other local institutions;

(iv) Loans in respect of minor irrigation schemes;

(v) Loans for providing short-term credit facilities;

(*b*) (i) the number of centres with population of 300 or more in the Development Block which have no schools;

(ii) the number of schools opened during the period of the operation of the Scheme;

(*c*) the number of Co-operative Societies organised;

(*d*) the number of village panchayats constituted?

A.—SRI H. C. LINGA REDDY (Deputy Minister for Planning and Development).—

(*a*) and (*b*), (*c*) and (*d*) *Vide* Statement appended.

N.E.S. Block, Kadaba.

Sl. No.	*Programme/Items.*	*Work Done*
1	Sinking of wells ...	13 wells are taken up and are progressing.
2	School buildings ...	2 buildings constructed. 3 improvements to existing buildings, 4 buildings under progress.
3	Roads	New Roads constructed: 4 miles and 4 furlongs. Repaired & Improved: 48 miles and 7½ furlongs. Culverts: 8 Estimates pending sanction. Drains Constructed: 1294 yards.
4	Social Education ...	Vanitha Samajas ... 2 Social Education Centres ... 6 Youth Clubs ... 4 Children's corners ... 7*
5	Grants-in-aid to Schools and number of schools opened.	A grant-in-aid of Rs. 1,500 at Rs. 150 for each school is set apart. There are five villages in Kadaba Block area with a population of over 300 and without schools. No new schools were opened under the N.E.S. Scheme.
6	Irrigation and Reclamation ...	Loans granted: Rs. 24,300.
7	Loans under short term credit facility.	Rs. 2,660.
8	Societies functioning ...	9 (nine).
9	Rural Banks started ...	1 at Kadaba. Proposed to start one at Punja and other Katrupady.
10	Panchayats	30 villages out of 43 villages of the block area are already brought under Panchayats. Action is being taken to bring the remaining 13 villages also under the Panchayats.

*6 completed and one under progress.

Sri K. VENKATARAMANA GOWDA.—May I know which are the roads newly constructed ?

Sri H. C. LINGA REDDY.—Altogether 4 miles and 4 furlongs of new and 48 miles and 7½ furlongs of the existing roads have been formed. I want notice to give details of roads.

Sri K. VENKATARAMANA GOWDA.—I would like to know in which locality or in which village these roads are?

Mr. DEPUTY SPEAKER.—He wants notice.

Sri H. C. LINGA REDDY.—I said that I want notice.

ಶ್ರೀ ಎಸ್. ನುಚ್ಚಯ್ಯನಾಯಕ್.—ಈ ಬ್ಲಾಕ್ಸ್ ಶುರುವಾಗಿ ಮೂರು ವರ್ಷಗಳಾದರೂ ಕೂಡ ಕೇವಲ 4½ ಮೈಲ ಮಾತ್ರ ಹೊಸ ರಸ್ತೆ ಆಗಿದೆ ಎಂದರೆ, ಈ ಕಚ್ಚಾರೋಡಿಗೆ ಬ್ಲಾಕ್‌ನಿಂದ ಏನೂ ಹಣ ಒದಗಿಸದೇ ಇದ್ದುದರಿಂದ ಹೀಗೆ ಇಷ್ಟು ಕಡಮೆ ಆಗಲಕ್ಕೆ ಕಾರಣ ವಾಯಿತು ಎಂದು ತಿಳಿಯುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಮಲೆನಾಡು ಪ್ರದೇಶ. ಆದ್ದರಿಂದ ಮೇ ನಿಂದ ನವಂಬರ್‌ವರೆಗೂ ಸಿವಿಲ್ ವರ್ಕ್ಸ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. 1957ರಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರನ್ನು ಟ್ರೈನಿಂಗಿಗೆ ಕಳುಹಿಸಿದ್ದರಿಂದ ಕೆಲಸ ಮಾಡುವುದಕ್ಕೆ ತಡ ಆಯಿತು. ಈಗ ಈ ಕೆಲಸಗಳನ್ನು ಜಾಗ್ರತೆ ಮಾಡುವುದಕ್ಕೆ ಹೆಚ್ಚಿನ ಗಮನ ಕೊಟ್ಟಿದೆ.

ಶ್ರೀ ಎಸ್. ನುಚ್ಚಯ್ಯನಾಯಕ್.—ಡೆವಲಪ್‌ಮೆಂಟ್ ಆಫೀಸರು ಟ್ರೈನಿಂಗ್ ಹೋದಕಾರಣವೇ ಇದು ಸ್ಥಗಿತವಾಯಿತೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ತಡ ಆಗುವುದಕ್ಕೆ ಅವಕಾಶವಾಯಿತು. ಅಲ್ಲಗೆ ಬೇರೆ ಕಡೆಯಿದ್ದ ಡೆವಲಪ್‌ಮೆಂಟ್ ಆಫೀಸರು ಹೋಗಿ ಕೆಲಸ ಮಾಡಿಸ ಬೇಕಾಗಿತ್ತು.

ಶ್ರೀ ಮಂಜಪ್ಪ ಉಲ್ಲಾಳ್.—300 ಮನೆಗಳನ್ನು ಕಟ್ಟಿಸಲಾಯಿತು ಎಂದು ಹೇಳಿದ್ದೀರಿ. ಅದನ್ನು ಯಾರು ಕಟ್ಟಿಸಿದರು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—300 ಮನೆಗಳನ್ನು ಕಟ್ಟಿದೆ ಎಂದು ಎಲ್ಲೂ ಹೇಳಿಲ್ಲ.

ಶ್ರೀ ಎಸ್. ನುಚ್ಚಯ್ಯನಾಯಕ್.—ಅಡ್ಡ ಕಾಲುವೆ ಗಳು ಎಂಟು ಮಂಜೂರು ಆಗಲು ಇವೆ ಎಂದು ಹೇಳಿ ದ್ದೀರಿ. ಇಷ್ಟರವರೆಗೂ ಒಂದು ಕೆಲಸವೂ ಆಗಿಲ್ಲ ಎಂದು ತಿಳಿಯುತ್ತದೆ. ಇನ್ನಾದರೂ ಆ ಕೆಲಸ ಮಾಡಲು ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

Sri G. SIVAPPA.—Against irrigation and reclamation, you have stated that loans granted is Rs. 24,300, and under loans under short term credit facility Rs. 2,600. If you see some of these items you will see that this is all that has been done in four years after it started. May I know whether the Deputy Minister is satisfied with the progress ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಪ್ರಾರಂಭವಾಗಿ ನಾಲ್ಕು ವರ್ಷಗಳಾದವು ಎನ್ನುವುದು ಸರಿಯಲ್ಲ. 1ನೇ ನವಂಬರ್ 1956ರಲ್ಲಿ ಪ್ರಾರಂಭವಾಯಿತು. 24,300 ರೂಪಾಯಿ ಎಕ್.ಇ.ಎಸ್. ಲೋನ್ ಅಮೌಂಟ್ ಕೊಟ್ಟಿರುವುದು ತೋರಿಸಿದೆ. About the progress in this block, as you know, it is Malnad area. As the Block Development Officer and the Sub Engineer had to be away for a long time, work could not be done very well in the beginning. Now instructions have been issued to show better progress.

ಶ್ರೀ ಜಿ. ಶಿವಪ್ಪ.—'Societies functioning 9' ಎಂದು ಹೇಳಿದ್ದೀರಿ. ಷಾರ್ಟ್ ಟರ್ಮ್ ಲೋನು ಡಿಸ್ಟ್ರಿಕ್ಟ್ ಬ್ಯಾಂಕ್ ಮೂಲಕ ಕೊಡಿಸಿರುವುದು ಎಷ್ಟು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ ವಿವರ ಇಲ್ಲ ನನ್ನ ಹತ್ತಿರ ಇಲ್ಲ.

ಶ್ರೀ ಜಿ. ಶಿವಪ್ಪ.—ವ್ಯವಸಾಯದ ವಿಚಾರವಾಗಿ ತಾವು ಏನು ಕೆಲಸ ಮಾಡಿದ್ದೀರಿ, ಸೀಡ್ಸ್‌ಗೆ ಕೊಟ್ಟಿರು ವುದು, ಮಲ್ಟಪ್ಲಿಕೇಷನ್, ಡಿಸ್ಟ್ರಿಬ್ಯೂಷನ್ ಈ ವಿಚಾರ ದಲ್ಲಿ ಏನು ಮಾಡಿದ್ದೀರಿ ಎಂಬುದನ್ನು ಹೇಳಲು ಸಾಧ್ಯವೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದಕ್ಕೆ ಬಹಳ ವಿವರಗಳನ್ನು ಕೊಡಬೇಕಾಗುತ್ತದೆ, ಸುಮಾರು ಒಂದೂವರೆ ಗಂಟೆ ಹೊತ್ತು ಹಿಡಿಯುತ್ತದೆ. ಸೀಡ್ ಮಲ್ಟಪ್ಲಿಕೇಷನ್ ಫಾರಂ ಪ್ರತಿಯೊಂದು ಬ್ಲಾಕ್‌ನಲ್ಲೂ ಮಾಡಬೇಕೆಂದು ಪತ್ರವ್ಯವಹಾರ ನಡೆದು ಅಲ್ಲಿಂದ ಯಾವುದೂ ಕೂಡ ಸೆಲೆಕ್ಟ್ ಮಾಡಿ ಕಳುಹಿಸಲಿಲ್ಲ. ಸೀಡ್ಸ್ ವಿಷಯದಲ್ಲಿ ಇಷ್ಟು ಕಾರ್ಯಕ್ರಮ ತೆಗೆದು ಕೊಳ್ಳಲಾಗಿದೆ: ವ್ಯವಸಾಯಗಾರರ ಡೆಮೊನ್‌ಸ್ಟ್ರೇಷನ್ ಬ್ಲಾಕ್ಸ್‌ನಲ್ಲಿ ಜಪ್ತಾ ಮಾದರಿ ಪದ್ಧತಿಯಲ್ಲಿ ಬತ್ತ ಬೆಳೆಯುವ ಕಾರ್ಯಕ್ರಮ ಮತ್ತು ಇರಿಗೇಷನ್ ರೆಕ್ಯಮೇಷನ್ ನಂಬಂಧವಾಗಿ ಕೂಡ 24,300 ರೂಪಾಯಿ ಹಣ ಕೊಡಲಾಗಿದೆ. ವ್ಯವಸಾಯಗಾರರು ವ್ಯವಸಾಯವನ್ನು ಪ್ರೋಗ್ರೆಸೀವ್ ರೀತಿಯಲ್ಲಿ ಮಾಡುವ ವಿಷಯವಾಗಿ ಬೇಕಾದಷ್ಟು ಪ್ರಚಾರ ಮಾಡಿ ಅವರಿಗೆ ತಿಳಿಸಲಾಯಿತು. ಹೀಗೆ ಇನ್ನೂ ಅನೇಕ ವಿಚಾರಗಳಿವೆ. ಬೇರೆ ಒಂದು ಪ್ರಶ್ನೆ ಹಾಕಿದರೆ ವಿವರ ತರಿಸಿಕೊಡುತ್ತೇನೆ.

ಶ್ರೀ ಯು. ಎಂ. ಮಾದಪ್ಪ.—ಮೈನರ್ ಇರಿಗೇಷನ್ನಿಗೆ ಕೊಟ್ಟಿರುವ ಒಂದು ಲಕ್ಷ ರೂಪಾಯಿಗಳನ್ನು ಮೂರು ವರ್ಷಗಳೊಳಗೆ ಪೂರೈಸಬೇಕೆಂಬ ನಿಯಮವಿ ದೆಯಲ್ಲವೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಒಂದು ಲಕ್ಷ ರೂಪಾಯಿ ಅಲ್ಲ. 3·4 ಲಕ್ಷ ರೂ ಪಾ ಯಿ ಕೊಟ್ಟಿದೆ. ಅದನ್ನು ಹೇಗೆ ಖರ್ಚು ಮಾಡಬೇಕೆಂಬುದು ಬ್ಲಾಕ್ ಡೆವಲಪ್‌ಮೆಂಟ್ ಕಮಿಟಿ ಮೆಂಬರ್ಸ್‌ಗೆ ಸೇರಿದ್ದು. ಅವರು ಖರ್ಚು ಮಾಡುವುದಕ್ಕೆ ಅವಕಾಶ ವಿದೆ. ಬಾವಿ ತೆಗೆಯುವುದು, ಕೆರೆಗಳ ರಿಪೇರಿ, ಬೇಣೋರ್ದ್ಧಾರ ಇವನ್ನೆಲ್ಲಾ ಮಾಡಬಹುದು.

Sri U. M. MADAPPA.—In 1956, one lakh was allotted and there was a stipulation to the effect that it must be completed in three years. Is it not a fact?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅಗ್ಗೆ ಒಂದು ಲಕ್ಷ ರೂಪಾಯಿ ಎಂದು ಇಟ್ಟಿತ್ತು. ಆ ಮೇಲೆ ವಿಮರ್ಶೆ ಆಗಿದೆ. ಮೂರು ನಾಲ್ಕು ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಹತ್ತು ಬಿಟಂಗಳಲ್ಲಿ ಲೋನ್ ಬಿಟಂ ಬಿಟ್ಟರೆ ಎಷ್ಟು ಹಣ ಖರ್ಚಾಗಿದೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಮುಖ್ಯವಾಗಿರುವ ವಿಷಯವೇ ಅದು. ಈ ಬ್ಲಾಕಿನಲ್ಲಿ ಆಗಿರುವ progress ಎಷ್ಟು, ಇದಕ್ಕಾಗಿ ಒಟ್ಟು ಎಷ್ಟು ಖರ್ಚಿಟ್ಟಿತ್ತು; ಎಷ್ಟು ಖರ್ಚು ಮಾಡಲಾಯಿತು, ಹೆಚ್ಚೂರಲ್ ಸಿಬ್ಬಂದಿಗಾಗಿ ಎಷ್ಟು ವೆಚ್ಚವಾಗಿದೆ—ಇದನ್ನೆಲ್ಲಾ ತಿಳಿಸುವುದು ಅವಶ್ಯಕ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ ವಿವರಗಳನ್ನು ಬೇಕಾದರೆ ತರಿಸಿಕೊಡುತ್ತೇನೆ. ಈಗ ಅವು ನನ್ನಲ್ಲಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಿಯೋಜಿತವಾದ ಕಾಲದಲ್ಲಿ ಎಷ್ಟು ಭಾಗ ಪೂರ್ತಿಯಾಗಿದೆ, ಇನ್ನೆಷ್ಟು ಭಾಗ ಉಳಿದಿದೆಯೆಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಹತ್ತು ವರ್ಷಗಳ ಕಾಲದಲ್ಲಿ, ಮೊದಲನೆ ಹಂತದಲ್ಲಿ 12 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಇನ್ನೆರಡು ವರ್ಷಗಳಲ್ಲಿ ಇನ್ನೆರಡು ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಇದರಲ್ಲಿ ಎಷ್ಟೆಷ್ಟು ಖರ್ಚಾಗಿದೆ, ಎಷ್ಟು ಉಳಿದಿದೆ ಎಂಬ ವಿವರ ಈಗ ನನ್ನಲ್ಲಿ. ಈ ಬ್ಲಾಕು 1ನೇ ನವಂಬರ್ 1956ರಲ್ಲಿ ಪ್ರಾರಂಭವಾದದ್ದಾಗಿ, ಒಂದು ವರ್ಷವೆಲ್ಲಾ ಅಂಕಿ ಅಂಶಗಳ ಶೇಖರಣೆಯಲ್ಲೇ ಇತ್ತು. ಅದು ಮಳೆನಾಡು ಪ್ರದೇಶವಾದದ್ದರಿಂದ ಮೇ ತಿಂಗಳಿನಿಂದ ನವಂಬರ್ ತಿಂಗಳವರೆಗೂ ಮಳೆಗಾಲವಾಗಿದ್ದು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಗೊತ್ತಾಗಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಒಂದು ಕಾರ್ಯಕ್ರಮ ಹಾಕಿಕೊಂಡಾಗ ಮುಂಚೆಯೇ ಇಂಥಿಂಥ ಎಡರು ತೊಡರುಗಳು ಬರುತ್ತವೆಂಬುದು ಸರ್ಕಾರದವರಿಗೆ ಗೊತ್ತಿತ್ತು. ಹೀಗಿರುವಾಗ ಏಕೆ ಕೆಲಸವಾಗಲಿಲ್ಲವೆಂದು ಕೇಳಿದರೆ, ನೀವು ಹೇಳುತ್ತಿರುವ ನಬೂಬು ಅರ್ಥವಾಗುವುದಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಕೆಲವು ಬಾಬುಗಳಲ್ಲಿ ಏನೇನು ಮಾಡಿದ್ದಾರೆ ಎಂಬುದು. ಒಟ್ಟು ಬ್ಲಾಕು ಏನೇನು ಕೆಲಸ ಮಾಡಿದೆಯೆಂದು ಕೇಳಿದ್ದರೆ ಹೇಳಬಹುದಾಗಿತ್ತು. ಯಾವಯಾವ ಬಾಬಿನಲ್ಲಿ ಏನೇನು ಕೆಲಸ ಮಾಡಿದ್ದಾರೆಂದು ಕೇಳಿದ್ದಾರೆ, ಅದನ್ನು ಇಲ್ಲಿ ಹೇಳಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈಗ ತಾವು ಕೊಟ್ಟಿರುವ ಉತ್ತರದಲ್ಲಿಯೇ, ಯಾವಯಾವ ಬಾಬುಗಳ ವಿಷಯದಲ್ಲಿ ಎಷ್ಟೆಷ್ಟು ಕೆಲಸ ನಡೆಯಬೇಕೆಂದು ಹೇಳಿತ್ತು, ಎಷ್ಟುಮಟ್ಟಿಗೆ ಅಪೂರ್ಣವಾಗಿದೆಯೆಂದು ಒಂದು comparative ಅಂಕಿ ಅಂಶಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇಲ್ಲಿ ಕೇಳಿರುವ ಹತ್ತು ಬಾಬುಗಳಲ್ಲಿ ಪ್ರತಿಯೊಂದಕ್ಕೂ ಆ ರೀತಿ ಅಂಕಿ ಅಂಶಗಳನ್ನು ಕೊಡಬೇಕೆಂದರೆ ಬಹಳ ದೀರ್ಘವಾದ ವಿವರಗಳನ್ನು ಕೊಡಬೇಕಾಗುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ತಾವು ಹೇಳಿದ 12 ಲಕ್ಷ ರೂಪಾಯಿಗಳಲ್ಲಿ ಮೂರನೆಯ ಒಂದು ಭಾಗ ವೆರ್ಚಾ ಕೇವಲ ಸಿಬ್ಬಂದಿ ಖರ್ಚು, ಜೀಪ್, ಪೆಟ್ರೋಲ್ ಮುಂತಾದುವುಗಳಿಗಾಗಿಯೇ ಹೋಗುತ್ತಿದೆಯೆಂಬುದು ತಮಗೆ ಗೊತ್ತಿದೆಯೇ?

Sri H. C. LINGA REDDY.—I think that question needs no answer. A systematic budget is there.

ಶ್ರೀ ರೇವಣ್ಣಸಿದ್ದಪ್ಪ.—ಅಲ್ಲಿ ಬಹುಭಾಗದ ಹಣವನ್ನು ಸಂಬಳಕ್ಕೇ ಖರ್ಚು ಮಾಡಬೇಕಾಗುತ್ತದೆಯಲ್ಲವೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದಕ್ಕೆಲ್ಲಾ systematic budget ಇದೆ. ತಾವು ಬೇಡವೆಂದು ಹೇಳಿದರೆ ಪ್ಲಾನಿಂಗ್ ಕಮಿಷನರಿಗೆ ತಿಳಿಸಬಹುದು.

ಶ್ರೀ ರೇವಣ್ಣಸಿದ್ದಪ್ಪ.—ಈಗ ಬಹುಭಾಗದ ಹಣ ಸಂಬಳಸಾರಿಗೆಗಳಿಗೆ ಹೋಗುತ್ತಿದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸಂಬಳಕ್ಕಾಗಿ ಎಷ್ಟು ಕೊಡಬೇಕೋ ಅಷ್ಟು ಕೊಡಲೇಬೇಕಾಗುತ್ತದೆ.

ಶ್ರೀ ರೇವಣ್ಣಸಿದ್ದಪ್ಪ.—ಬ್ಲಾಕನ್ನು develop ಮಾಡಬೇಕೆಂಬುದಲ್ಲವೇ ಸರ್ಕಾರದವರ ಉದ್ದೇಶ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಬಹುಭಾಗದ ಹಣ ಸಿಬ್ಬಂದಿಗೆ ಹೋಗುವುದಿಲ್ಲ. ಎಷ್ಟು ಹೋಗಬೇಕೋ ಅಷ್ಟು ಹೋಗುತ್ತಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತಾವು ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ಅಲ್ಲಿ ನಡೆದಿರುವ ಕೆಲಸ ಅಸಮರ್ಪಕವಾಗಿದೆಯೆಂದು ಗೊತ್ತಾಗುವುದಿಲ್ಲವೇ?

(ಉತ್ತರವಿಲ್ಲ)

Sri M. MALLIKARJUNASWAMY.—May I know what is the percentage of money spent on the establishment?

Sri H. C. LINGA REDDY.—I require notice. It has to be worked out Sir.

Sri C. K. RAJAIAH SETTY.—By looking into the figures furnished by the Government, do the Government accept that this Blocks has failed to fulfil its objectives?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆಗಲೇ ಉತ್ತರ ಹೇಳಿದೆ. ಅದು ಮಳೆನಾಡು ಪ್ರದೇಶವಾದದ್ದರಿಂದ ಹೆಚ್ಚಿಗೆ ಕೆಲಸ ನಡೆಸಲಾಗಿಲ್ಲ. ಮತ್ತು ಮೊದಲನೆ ವರ್ಷ, 1ನೇ ನವಂಬರ್ 1956ರಿಂದ ಒಂದು ವರ್ಷ ಕಾಲ ಅಂಕಿಅಂಶಗಳ ಶೇಖರಣೆಯಲ್ಲೇ ಮುಗಿಯಿತು.

Sri C. J. MUCKANNAPPA.—Sir, you have furnished figures of amounts spent on establishment and amounts spent for the local development works. Comparatively, will it not go to show that the N.E.S. block is a failure?

Sri H. C. LINGA REDDY.—If the Hon'ble Member is referring to the local development works, it will not come under the N.E.S. block. I am

not prepared to admit that it is a failure.

Sri C. J. MUCKANNAPPA.—If you compare these two sets of figures, will it not show that the N.E.S. block is a thorough failure, Sir ?

Sri H. C. LINGA REDDY.—No Sir.

Mr. DEPUTY SPEAKER.—It is a matter of inference.

ಶ್ರೀ ಜಿ. ಎಕ್. ಪುಟ್ಟಣ್ಣ.—ಇನ್ನು ಮೇಲೆ ಪ್ರತಿ ವರ್ಷವೂ ಈ ರೀತಿಯ confusionನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಯಾವಯಾವ N.E.S. ಬ್ಲಾಕಿನಲ್ಲಿ ಎಷ್ಟೆಷ್ಟು ಖರ್ಚಾಗಿದೆ, ಅದರಲ್ಲಿ ಸಿಬ್ಬಂದಿಗಾಗಿ ಎಷ್ಟು, ಮಿಕ್ಕ ವಿಷಯಗಳಿಗಾಗಿ ಎಷ್ಟು ಎಂದು ಹೇಳಿ ಒಂದು statementನ್ನು ಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಕೊಡುತ್ತೇವೆ ; ಕೊಡುತ್ತಲೂ ಇದ್ದೇವೆ.

ಶ್ರೀ ಜಿ. ಎಕ್. ಪುಟ್ಟಣ್ಣ.—ಕೊಡುವುದೆಂದರೆ, ಏನೇನೋ ವಿಷಯಗಳನ್ನು ಫಸ್ಟ್‌ಕ್ಲಾಸ್ ಇಂಗ್ಲೀಷ್ ನಲ್ಲಿ ಬರೆಸಿಕೊಟ್ಟಿದ್ದೇವೆಂಬುದಲ್ಲ. ನಿಖರವಾಗಿ ಅಂಶಗಳನ್ನು ಇಡಬೇಕು. ಎಷ್ಟು ಹಣ ಮಂಜೂರಾಗಿತ್ತು, ಸಿಬ್ಬಂದಿಗಾಗಿ ಎಷ್ಟಾಯಿತು, ಬೇರೆ ಪ್ರತಿಯೊಂದು ಬಾಬುಗಳಿಗೆ ಎಷ್ಟೆಷ್ಟಾಯಿತು, ಪೂರ್ತಿಯಾದ ಕೆಲಸಗಳು ಯಾವುವು, ಅಪೂರ್ಣವಾಗಿರುವುವು ಯಾವುವು ಎಂಬುದನ್ನೆಲ್ಲಾ ತಿಳಿಸಬೇಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಫಸ್ಟ್‌ಕ್ಲಾಸ್ ಇಂಗ್ಲೀಷಿನಲ್ಲಿ ಕೊಟ್ಟುಬಿಡುತ್ತಾರೆಂದು ಹೇಳಿದಿರಿ. ಕನ್ನಡದಲ್ಲೂ ಕೊಡುತ್ತೇವೆ.

ಶ್ರೀ ಜಿ. ಎಕ್. ಪುಟ್ಟಣ್ಣ.—ಕನ್ನಡ, ಇಂಗ್ಲಿಷ್, ತಮಿಳು ಯಾವುದರಲ್ಲಾದರೂ ಕೊಡಿ. ಮುಖ್ಯವಾಗಿ ವಿವರಗಳನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ತಿಳಿಸುತ್ತೇವೆ. In fact Hon'ble Members are *ex-officio* members of the Block Development Committees and they will have opportunities to review the work and also participate in the discussion and watch the progress of the works. We will furnish all the details.

Assessment of rent to the residential portion of the building occupied by the Deputy Excise Commissioner, Gulbarga.

Q.—2492. Sri BALWANT RAO (Bhalki).—

Will the Government be pleased to state :—

(*a*) whether they are aware that the residential portion of the office building occupied by the Deputy Excise Commissioner of Gulbarga fetches a higher rent than the present nominal rent of Rs. 29 assessed by the P.W.D. of Gulbarga ;

(*b*) if so, the reasons for this low assessment and action taken by the Government in this regard ?

A.—Sri N. RACHIAH (Minister for Social Welfare, Excise and Prohibition).—

(*a*) The rent of the residential portion occupied by the Deputy Excise Commissioner has been assessed by the P.W.D. under the rules.

(*b*) Does not arise in view of the answer to question (*a*).

Sri BALWANT RAO.—May I know the amount assessed for the whole building occupied by the officer as well as the office ?

*Sri N. RACHIAH.—This was the amount assessed by the Hyderabad Government and the portion which was actually occupied by the Excise Departmental officer was assessed as Rs. 29.

Sri BALWANT RAO.—I want the whole amount assessed for the whole building—I want the total assessment.

Sri N. RACHIAH.—We are not concerned with the total assessment. We are only concerned with the portion of the building occupied by the Excise Department.

Sri BALWANT RAO.—Is it not a fact, Sir, that the Excise Department is occupying a larger portion of the building, Sir ?

Sri N. RACHIAH.—No, Sir.

Construction of Road from Raichur to Singnodi under Scarcity Works.

Q.—2551. Sri G. BHIMANNA (Raichur).—

Will the Government be pleased to state :—

(*a*) whether it is a fact that only a Seven-mile long road has been constructed from Raichur to Singnodi under the Famine Relief Works Scheme ;

(*b*) if so, whether necessary sanction has been accorded for the completion of the remaining portion thereof ?

A.—Sri H. M. CHANNABASAPPA (Minister for Public Works and Electricity).—